**<u>ಸಾಕ್ಷಿಯನ್ನು ದಿನಾಂಕ: 10-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲು 9 ನೇ ಪ್ರತಿವಾದಿ ಪರ ವಕೀಲರಾದ ಶ್ರೀ MH ರವರಿಂದ</u>**

**1.** ಸರ್ವೆ ನಂ. 42 ವಿಸ್ತೀರ್ಣ 2 ಎಕರೆ 20 ಗುಂಟೆ ವಾದಿಗಳಿಗೆ ಸೇರಿದ್ದು ಎಂದು ಅವರು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಗಳು ಹಂಚಿಹಳ್ಳಿ ಗ್ರಾಮದ ವಾಸಿಗಳಾಗಿರುತ್ತಾರೆಂದರೆ ಸರಿ. ಹಂಚಿಹಳ್ಳಿ ಗ್ರಾಮದಿಂದ ಚಿಂಚೆನಹಳ್ಳಿ ಗ್ರಾಮಕ್ಕೆ 20 ಕಿ.ಮೀ ಅಂತರ ವಾಗುತ್ತದೆ. ದುರ್ಗಪ್ಪರವರನ್ನು ನಾನು ನೋಡಿರುತ್ತೇನೆ. ಸದರಿ ದುರ್ಗಪ್ಪನವರಿಗೆ 6 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳಿದ್ದು ಆ ಪೈಕಿ ಎರಡು - ಮೂರು ಜನರ ಹೆಸರು ಮಾತ್ರ ಗೊತ್ತು, ಉಳಿದವರ ಹೆಸರು ಗೊತ್ತಿಲ್ಲ. ದುರ್ಗಪ್ಪನ ಎಲ್ಲಾ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

2. ದಿನಾಂಕ 10-07-1972 ರ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ, ನನಗೆ ಓದಲು ಬರದೇ ಇರುವ ಕಾರಣ ನಾನು ಸದರಿ ಕ್ರಯ ಪತ್ರವನ್ನು ಓದಿರುವುದಿಲ್ಲ. ಸದರಿ ಕ್ರಯ ಪತ್ರದಲ್ಲಿನ ಅಂಶಗಳನ್ನು ನಾನು ಕೇಳಿ ತಿಳಿದುಕೊಂಡಿದ್ದು ಈಗ ನನಗೆ ನೆನಪಿಲ್ಲ. ದಿನಾಂಕ 10-07-1972 ರ ಕ್ರಯ ಪತ್ರವನ್ನು ಸರ್ವೆ ನಂ. 11 ಕ್ಕೆ ಸಂಬಂಧಿಸಿದಂತೆ ಬರೆದಿರುತ್ತಾರೆ. ಸದರಿ ಸರ್ವೆ ನಂ. 11 ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆಂದು ನನಗೆ ಗೊತ್ತಿಲ್ಲ. ಸರ್ವೆ ನಂ. 11 ಒಟ್ಟು 12 ಎಕರೆ 3 ಗುಂಟೆ ವಿಸ್ತೀರ್ಣ ಇರುತ್ತದೆಂದರೆ ಇರಬಹುದು. ದಿನಾಂಕ 10-07-1972 ರ ಕ್ರಯ ಪತ್ರದಲ್ಲಿ ಕಾಣಿಸಿರುವ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಹಳ್ಳ, ಪಶ್ಚಿಮಕ್ಕೆ ಚಿನ್ನ ನರಸಪ್ಪನ ಜಮೀನು, ಉತ್ತರಕ್ಕೆ ಕೆಂಜಿಗಪ್ಪನವರ ಸರ್ವೆ ನಂ. 43 ಜಮೀನು, ದಕ್ಷಿಣಕ್ಕೆ ಹನುಮಂತಪ್ಪನವರ ಜಮೀನು ಬರುತ್ತದೆ. ಸರ್ವೆ ನಂ. 11 ರ ಪೊಡಿ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಹದ್ದುಬಸ್ತು ಚೆಕ್ಕುಬಂದಿ ನಾನು ನೋಡಿರುವುದಿಲ್ಲ. ಸರ್ವೆ ನಂ. 11 ಎಷ್ಟು ಪೊಡುಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 42/1 ರ ವಿಸ್ತೀರ್ಣ 1 ಎಕೆರೆ 34 ಗುಂಟೆಗೆ ಸಂಬಂಧಿಸಿದಂತೆ RRT Dis 3/1989-90 ರ ಆದೇಶದಂತೆ ಕೆಂಜಿಗಪ್ಪನವರ ಹೆಸರಿಗೆ ಹಕ್ಕು ನಿಗದಿಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 42, 11 ಮತ್ತು 43 ಬೇರೆ ಬೇರೆ ಸರ್ವೆ ನಂಬರುಗಳು ಎಂದರೆ ನನಗೆ ಗೊತ್ತಿಲ್ಲ. ಕೆಂಜಿಗಪ್ಪನವರು ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಕೆಂಜಿಗಪ್ಪನವರು ಮೃತ ಪಟ್ಟನಂತರ ಸಶವೆ ನಂ. 42/1 ರ ಲ್ಲಿ 1 ಎಕರೆ 34 ಗುಂಟೆ ವಿಸ್ತೀರ್ಣ ಖಾತೆಯು MR No. 9/1998-99 ರಂತೆ ಅವರ ವಾರಸುದಾರರಿಗೆ ಖಾತೆ

ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಂತರ 1 ನೇ ಪ್ರತಿವಾದಿ ಅವರ ಕುಟುಂಬದವರು ಸದರಿ ಆಸ್ತಿಯನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

3. ಸರ್ವೆ ನಂ. 11 ಮತ್ತು 42/1 ರ ಚೆಕ್ಕುಬಂದಿ ಬೇರೆ ಬೇರೆ ಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದ ಮೇಲೆ 9 ನೇ ಪ್ರತಿವಾದಿ ಹೆಸರಿಗೆ MR No. 3/1999 ರಂತೆ ಖಾತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಖಾತೆ ಆದಾಗಿನಿಂದಲೂ ಸರ್ವೆ ನಂ. 42/1 ರ 1 ಎಕರೆ 34 ಗುಂಟೆ ವಿಸ್ತೀರ್ಣ ದಲ್ಲಿ 9 ನೇ ಪ್ರತಿವಾದಿ ಸ್ವಾದೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ. 9 ನೇ ಪ್ರತಿವಾದಿ ಬೋರ್ ವೆಲ್ ನ್ನು ಕೊರೆಸಿ, ಅಡಿಕೆ ಬೆಳೆ ಇಟ್ಟಿರುತ್ತಾರೆಂದರೆ ಸರಿಯಲ್ಲ, ಬೀಡು ಇರುತ್ತದೆ. ಸದರಿ ಆಸ್ತಿಯನ್ನು ಬ್ಯಾಂಕುಗಳಲ್ಲಿ ಅಡಮಾನ ಮಾಡಿ 9 ನೇ ಪ್ರತಿವಾದಿ ಸಾಲವನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಸರ್ವೆ ನಂ. 42/1 , 9 ನೇ ಪ್ರತಿವಾದಿ ಹೆಸರಿಗೆ ಪಹಣಿ ಬರುತ್ತಿರುತ್ತದೆಂದರೆ ನನಗೆ ಗೊತಿತಲ್ಲ, ಸದರಿ ಸರ್ವೆ ನಂಬರಿನ ಪಹಣಿ ನಾನು ನೋಡಿರುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ಹಾಗೂ ಸರ್ವೆ ನಂ. 11 ಕ್ಕೆ ಸಂಬಂಧಿಸಿದಂತೆ ನನಗೆ ಏನೂ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದೇ ಇದ್ದರೂ ವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ ಎಂದರೆ ಸರಿ.

**ಪಾಟೀಸವಾಲು 10 ನೇ ಪ್ರತಿವಾದಿ ಕಾನೂನು ಬದ್ಧ ವಾರಸುದಾರರ ಪರ ವಕೀಲರಾದ ಶ್ರೀ HRR ರವರಿಂದ**

1. ಈ ದಾವೆಯನ್ನು ಸರ್ವೆ ನಂ. 42 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂ. 42 ಮೂಲ ಸರ್ವೆ ನಂಬರ್ 11 ಆಗಿತ್ತು. ನನಗೆ ಸರ್ವೆ ನಂ. 42 ಮತ್ತು 43 ರ ಬಗ್ಗೆ ಮಾತ್ರ ಗೊತ್ತು. ಸರ್ವೆ ನಂ. 42/2 ನೇ ಪೊಡಿಗೆ ಸಂಬಂಧಿಸಿದಂತೆ ನನಗೆ ಗೊತ್ತಿಲ್ಲ. ದಿನಾಂಕ 28-04-2004 ರಂ ದು 10 ನೇ ಪ್ರತಿವಾದಿಯು ಲಕ್ಷ್ಮಮ್ಮ ಕೋಂ ಹುಚ್ಚಪ್ಪರವರಿಂದ 2 ಎಕರೆ 20 ಗುಂಟೆ ಯನ್ನು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ 2013 ನೇ ಸಾಲಿನ ತನಕ 10 ನೇ ಪ್ರತಿವಾದಿ ಹೆಸರಿಗೆ ಖಾತೆ ಇದ್ದು ಅವರೇ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ. ದಿನಾಂಕ 12-07-2013 ರಂದು 10 ನೇ ಪ್ರತಿವಾದಿಯು ಅವರ ಮಕ್ಕಳಾದ ಎ ಹಚ್ ಜಗದೀಶ ಮತ್ತು ಗಂಗರಾಜು ರವರಿಗೆ ಸರ್ವೆ ನಂ. 42/2 ವಿಸ್ತೀರ್ಣ 2 ಎಕರೆ 20 ಗುಂಟೆಗೆ ಸಂಬಂಧಿಸಿದಂತೆ ನೊಂದಾಯಿತ ದಾನ

ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ದಾನ ಪತ್ರದ ಆಧಾರದ ಮೇಲೆ ಎ ಹೆಚ್ ಜಗದೀಶ ರವರ ಹೆಸರಿಗೆ ಖಾತೆ ಬದಲಾವಣೆ ಆಗಿ ಅಂದಿನಿಂದಲೂ ಅವರೇ ಸದರಿ ಆಸ್ತಿಯಲ್ಲಿ ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ.

2. ದಾವಾ ಆಸ್ತಿಯ ಪಕ್ಕದಲ್ಲಿ ನನಗೆ ಸೇರಿದ ಸರ್ವೆ ನಂ .45 ಇರುತ್ತದೆ. ದಾವಾ ಆಸ್ತಿಯ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲದೇ ಇದ್ದರೂ ವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**